# ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಚಿಕ್ಕಬಳ್ಳಾಪುರ, ಕಾರ್ಯಸ್ಥಾನ ಚಿಂತಾಮಣಿ.

## ಎಸ್.ಸಿ. ನಂಃ 38/2023

| | | | |
|---|---|---|---|
| **ಸಾಕ್ಷಿದಾರರ ಹೆಸರುಃ** | ರಂಗನಾಥ | ಪ್ರಾಸಾಃ | 12 |
| **ತಂದೆಯ ಹೆಸರುಃ** | ಪಾಪಣ್ಣ | ಚಾಸಾಃ | 33 |
| **ವಯಸ್ಸುಃ** | 42 | ಪ್ರಮಾಣ ವಚನ ಭೋದಿಸಿದ ದಿನಾಂಕ | 14.07.2025 |
| **ಉದ್ಯೋಗಃ** | ರೈತ | | |
| **ವಾಸ ಸ್ಥಳಃ** | ಎಣ್ಣೂರು | | |

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

**(ಆರೋಪಿಯನ್ನು ವಿಸಿ ಮುಖಾಂತರ ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿದೆ)**

ಈಗ ನನಗೆ ತೋರಿಸಿದ ಮಹಜರ್ ನಲ್ಲಿರುವ ಸಹಿ ನನ್ನದು. ಅದನ್ನು ನಾನು ಮಾರಪ್ಪ ರವರ ರೇಷ್ಮೆ ಹುಳು ಮನೆಯ ಬಳಿ ಮಾಡಿದ್ದೇನೆ. ಅದನ್ನು ನಿಪಿ-34 ಎಂದು ಸಹಿಯನ್ನು ನಿಪಿ-34(ಬಿ ) ಎಂದು ಗುರುತಿಸಲಾಯಿತು. ಪೋಲಿಸರು ಆ ಜಾಗಕ್ಕೆ ಬಂದಿದ್ದು ಮಹಜರ್ ಜರುಗಿಸುತ್ತಿದ್ದರು. ಆ ದಿನ ಆರೋಪಿ ಕೂಡ ಪೋಲಿಸರ ಜೊತೆಯಲ್ಲಿ ಇದ್ದ. ಆ ಸಮಯದಲ್ಲಿ ನಾನು ಈಗ ನನಗೆ ತೋರಿಸಿದ ಕ್ಯಾನ್ , ಮಚ್ಚು ಹಾಗೂ ಶರ್ಟ್ ನೋಡಲಿಲ್ಲ. ಈಗ ನನಗೆ ತೋರಿಸಿದ ಮತ್ತೊಂದು ಮಹಜರ್ ನಲ್ಲಿರುವ ಸಹಿ ಕೂಡ ನನ್ನದೆ. ಸದರಿ ಮಹಜರ್ ನ್ನು ನಿಪಿ-35 ಎಂದು ಸಹಿಯನ್ನು 35(ಬಿ) ಎಂದು ಗುರುತಿಸಲಾಯಿತು. ಅದನ್ನು ಸಹ ಅದೇ ಜಾಗದಲ್ಲಿ ಮಾಡಿದ್ದೇನೆ. ಯಾವ ಕಾರಣಕ್ಕೆಂದು ಗೊತ್ತಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅಭಿಯೋಜಕರು ಅನುಮತಿ ಕೇಳಿದ್ದಾರೆ. ಅನುಮತಿ ನೀಡಲಾಗಿದೆ)**

**ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ**

ದಿನಾಂಕ 26.02.2023 ರಂದು ಕೊಲೆ ಪ್ರಕರಣಕ್ಕೆ ಸಂಬಂದಿಸಿದಂತೆ ಆರೋಪಿ ಕೊಲೆಗೆ ಬಳಸಿದ ಕ್ಯಾನ್, ಮಚ್ಚು ಹಾಗೂ ಶರ್ಟ್ ಹಾಜರುಪಡಿಸಿದಾಗ ಪಿಳ್ಳಮ್ಮನವರ ರೇಷ್ಮೇ ಮನೆಯ ಬಳಿ ನಿಪಿ-34 ಜರುಗಿಸಿದಾಗ ನನ್ನ ಸಮಕ್ಷಮ ಸದರಿ ಕ್ಯಾನ್, ಮಚ್ಚು ಹಾಗೂ ಶರ್ಟ್ ಅಮಾನತುಪಡಿಸಿಕೊಂಡಾಗ ಪಂಚನಾಗಿ ಸಹಿ ಮಾಡಿದ್ದು ನಂತರ ಅದೇ ದಿನ ನೇತ್ರಮ್ಮನ ಮನೆಯ ಮುಂಭಾಗ ಕೊಲೆ ಮಾಡಲು ಸಂಚು ರೂಪಿಸಿದ್ದಾಗಿ ಆರೋಪಿ ತೋರಿಸಿಕೊಟ್ಟ ಮೇರೆಗೆ ನಿಪಿ-35 ಮಹಜರ್ ಗೆ ಪಂಚನಾಗಿ ಸಹಿ ಮಾಡಿದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ ಪಾಟೀ ಸವಾಲು ಏನು ಇರುವುದಿಲ್ಲವೆಂದು ತಿಳಿಸಿದ್ದಾರೆ.**

**ಮರು ವಿಚಾರಣೆಃ ..... ಇಲ್ಲ .....**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು) ಓ.ಹೇ.ಕೇ. ಸರಿ ಇದೆ.

ಸಹಿ/-

ದಿಃ 14.07.2025
ಸ್ಥಳಃ ಚಿಂತಾಮಣಿ

**(ಕೆ.ಎಂ.ರಾಜಶೇಖರ)**
ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಬಳ್ಳಾಪುರ, ಕಾರ್ಯಸ್ಥಾನ ಚಿಂತಾಮಣಿ.